

> ಕಾನೂನು ಚೌಕಟ್ಟಿನಲ್ಲಿ ಶಿಕ್ಷಕರ ಏನೆಲ್ಲ ಬೇಡಿಕೆಗಳನ್ನು ಈಡೇರಿಸಬಹುದೋ ಅವುಗಳನ್ನು ಈಡೇರಿಸಲು ಸರ್ಕಾರ ಸಿದ್ಧವಿದೆ...

ಹೇಳಿಕೊಡಲು ದಸರಾ ಮುಗಿದ ಬಳಿಕ ವಿಭಾಗಮಟ್ಟದಲ್ಲಿ ಕಾರ್ಯಾಗಾರ ನಡೆಸುತ್ತೇವೆ. ಮೊದಲ ಹಂತದಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ತರಬೇತುಗೊಳಿಸಿ, ನಂತರ ಅವರ ಮೂಲಕ ಎಲ್ಲ ಶಿಕ್ಷಕರನ್ನು ಅಣಿಗೊಳಿಸಲಿದ್ದೇವೆ.

ನಾನು ‘ತೆರೆದ ಪುಸ್ತಕ ಪರೀಕ್ಷೆ’ (ಓಪನ್ ಬುಕ್ ಎಕ್ಸಾಮ್) ಕುರಿತು ಪ್ರಸ್ತಾಪ ಮಾಡಿದ್ದು ಗುಣಾತ್ಮಕ ಶಿಕ್ಷಣದ ಹಿನ್ನೆಲೆಯಲ್ಲೇ. ವರ್ಷದುದ್ದಕ್ಕೂ ನಡೆಯುವ ವಿವಿಧ ಪರೀಕ್ಷೆಗಳನ್ನು ಮಗು ಪುಸ್ತಕ ನೋಡಿ, ಉತ್ತರ ಬರೆಯಲು ರೂಢಿಸಿಕೊಂಡರೆ, ಅಂತಿಮ ಪರೀಕ್ಷೆ ವೇಳೆಗೆ ಯಾವುದೇ ಭಯವಿಲ್ಲದೆ, ಸ್ವತಂತ್ರವಾಗಿ ಯೋಚಿಸಿ ಬರೆಯುವ ಸಾಮರ್ಥ್ಯ ಪಡೆಯುತ್ತದೆ. ಆದರೆ, ಈ ಪರಿಕಲ್ಪನೆಗೆ ಸಂಬಂಧಿಸಿದಂತೆ ವಿನಾಕಾರಣ ವಿವಾದ ಸೃಷ್ಟಿಸಲಾಯಿತು.

**▸ ಕೇಂದ್ರ ಸರ್ಕಾರಿ ಶಾಲೆಗಳ ಶಿಕ್ಷಕರ ವೇತನಕ್ಕಿಂತ ತಮ್ಮ ಸಂಬಳ ಕಡಿಮೆ ಎಂಬ ನೋವು ರಾಜ್ಯದ ಶಿಕ್ಷಕರನ್ನು ಕಾಡುತ್ತಿದೆಯಲ್ಲ?**

ಶಿಕ್ಷಕರ ಸಂಘಟನೆ ಈ ವಿಷಯವನ್ನು ನನ್ನ ಗಮನಕ್ಕೂ ತಂದಿದೆ. ಈ ವಿಷಯವನ್ನು ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸುತ್ತೇನೆ.

**▸ ಬೇರೆಲ್ಲೂ ಇಲ್ಲದಷ್ಟು ಖಾಸಗಿ ಶಾಲೆಗಳ ಮೇಲಿನ ವ್ಯಾಮೋಹ ನಮ್ಮಲ್ಲಿ ಇರುವುದು ಏಕೆ?**

ಮೂಲಭೂತ ಸೌಕರ್ಯ, ವ್ಯವಸ್ಥಿತ ಬೋಧನೆ ವಿಷಯದಲ್ಲಿ ಖಾಸಗಿ ಶಾಲೆಗಳ ಪೈಪೋಟಿಯನ್ನು ಸರ್ಕಾರಿ ಶಾಲೆಗಳು ಎದುರಿಸುತ್ತಿವೆ. ಹೀಗಾಗಿಯೇ ಖಾಸಗಿ ಶಾಲೆಗಳ ಸಂಖ್ಯೆ ಹೆಚ್ಚುತ್ತಲೇ ಇದ್ದು, ಸರ್ಕಾರಿ ಶಾಲೆಗಳಿಗೆ ಮಕ್ಕಳೇ ಬಾರದ ಸ್ಥಿತಿ ನಿರ್ಮಾಣವಾಗಿದೆ. ಖಾಸಗಿ ಶಾಲೆಗಳ ಶಿಕ್ಷಕರಿಗೆ ಹೋಲಿಸಿದರೆ ನಮ್ಮ ಶಿಕ್ಷಕರ ಸಾಮರ್ಥ್ಯ ಹೆಚ್ಚಾಗಿದೆ. ಉತ್ತಮ ಮೂಲಸೌಕರ್ಯಗಳನ್ನೂ ಒದಗಿಸಲಿದ್ದೇವೆ.

ಖಾಸಗಿ ಶಾಲೆಗಳಲ್ಲಿ ಇಂಗ್ಲಿಷ್ ಅನ್ನು ಚೆನ್ನಾಗಿ ಕಲಿಸುತ್ತಾರೆ ಎಂಬ ಭಾವನೆ ಪೋಷಕರಲ್ಲಿದೆ. ನಾವು ಕೂಡ ಮಕ್ಕಳಿಗೆ ಒಂದು ಭಾಷೆಯಾಗಿ ಇಂಗ್ಲಿಷ್ ಕಲಿಸುವ ಬಗ್ಗೆ ಯೋಜನೆ ರೂಪಿಸುತ್ತಿದ್ದೇವೆ. ಖಾಸಗಿ ಶಾಲೆಗಳಿಗಿಂತ ಸರ್ಕಾರಿ ಶಾಲೆಗಳೇ ಶ್ರೇಷ್ಠ ಎಂಬುದನ್ನು ನಿರೂಪಿಸಲಿದ್ದೇವೆ. ■



**ಆಪ್ತ ಕಲಿಕೆ:** ಪ್ರತಿ ಮಗುವಿಗೂ ವಿಶೇಷ ಗಮನ ನೀಡುವುದು ಶಿಕ್ಷಕರ ಹೊಣೆಗಾರಿಕೆ

ಸಮಸ್ಯೆಗೊಂದು ಬಿಡಿಯಾದ ಪುಟ್ಟ ಪರಿಹಾರ ಸೂಚಿಸುತ್ತಾರೆ ಶಿಕ್ಷಕ ಜಗನ್ನಾಥ ಬಿಸರಳ್ಳಿ.

ಯಾವುದೇ ಶಾಲೆಗೆ ಮೇಷ್ಟ್ರ ಭೇಟಿಗೆ ಹೋದರೆ ‘ಅವರು ಬಿಇಒ ಕಚೇರಿಗೆ ಹೋಗಿದ್ದಾರೆ’, ‘ಆನ್‌ಲೈನ್‌ನಲ್ಲಿ ಅರ್ಜಿ ತುಂಬಲು ಹೋಗಿದ್ದಾರೆ’, ‘ಬಿಸಿಯೂಟದ ಸಮಸ್ಯೆ ಬಗೆಹರಿಸಲು ಹೋಗಿದ್ದಾರೆ’ – ಇದೇ ತೆರನಾದ ಉತ್ತರಗಳು ಬರುತ್ತವೆ. ಇಂತಹ ಉತ್ತರಗಳನ್ನು ಕೇಳಿದಾಗ ‘ಅರೆರೆ ಮೇಷ್ಟ್ರ ಕೆಲ್ಸ ಶಾಲೇಲಲ್ವೆ’ ಎಂಬ ಗೊಂದಲ ಮೂಡುತ್ತದೆ. ಹೌದು, ಶಿಕ್ಷಣತಜ್ಞರು, ಮೇಷ್ಟ್ರುಗಳು, ಪೋಷಕರು, ವಿದ್ಯಾರ್ಥಿಗಳು ಎಲ್ಲರದ್ದೂ ಒಂದೇ ಮನವಿ: ‘ದಯವಿಟ್ಟು ಶಿಕ್ಷಕರಿಗೆ ಪಾಠ ಮಾಡಲು ಬಿಡಿ’!

ಇತರೆ ಸರ್ಕಾರಿ ಅಧಿಕಾರಿಗಳಿಗೆ ಇಲ್ಲದಿರುವ ದಸರೆ ಮತ್ತು ಬೇಸಿಗೆ ರಜೆಗಳ ಸವಲತ್ತು ಶಿಕ್ಷಕರಿಗೆ ದೊರೆಯುತ್ತದೆ. ಈ ಸೌಲಭ್ಯ ಕೂಡ ಶಿಕ್ಷಕ ವೃಂದದ ಬಗ್ಗೆ ಕೆಲವರ ಕಣ್ಣು ಕೆಂಪಾಗಲು ಕಾರಣ. ಹೀಗೆ ದೂರುವವರು, ಶಿಕ್ಷಕರು ತಮ್ಮ ವೃತ್ತಿಪರ ಕೌಶಲ್ಯಗಳನ್ನು ನವೀಕರಿಸಿಕೊಳ್ಳಲು ಈ ಅವಧಿ ಅಗತ್ಯ ಎನ್ನುವುದನ್ನು ಗಮನಿಸುವುದಿಲ್ಲ. ಈಚಿನ ವರ್ಷಗಳಲ್ಲಂತೂ ಬಿಸಿಯೂಟದ ಜವಾಬ್ದಾರಿ, ತರಬೇತಿ ಸೇರಿದಂತೆ ವಿವಿಧ ಕಾರಣಗಳಿಗಾಗಿ ಶಿಕ್ಷಕರ ರಜೆ ದಿನಗಳು ಕಡಿಮೆಯಾಗುತ್ತಿವೆ. ಇದು ಶಿಕ್ಷಕರ ಮಾನಸಿಕ ಒತ್ತಡವನ್ನು ಮತ್ತಷ್ಟು ಹೆಚ್ಚಿಸುತ್ತಿದೆ.

ಶಿಕ್ಷಕರ ಮೇಲಿನ ಹೆಚ್ಚುವರಿ ಜವಾಬ್ದಾರಿಗಳನ್ನು ಚರ್ಚಿಸುವುದರ ಜೊತೆಗೆ ಕೆಲವು ಶಿಕ್ಷಕರ ಹೊಣೆಗೇಡಿತನವನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು. ಕೆಲವು ಶಾಲೆಗಳಲ್ಲಿನ ಶಿಕ್ಷಕರಿಗೆ ತಮ್ಮ ವೃತ್ತಿ ಎರಡನೇ ಆದ್ಯತೆಯಾಗಿರುತ್ತದೆ. ಊರಿನ ರಾಜಕೀಯದಲ್ಲಿ ಹಾಗೂ ಸಣ್ಣಪುಟ್ಟ ಲೇವಾದೇವಿ ವ್ಯವಹಾರದಲ್ಲಿ ತೊಡಗಿಕೊಂಡು ತರಗತಿಗಳನ್ನು ನಿರ್ಲಕ್ಷಿಸುವ ಮೇಷ್ಟರುಗಳೂ ಇದ್ದಾರೆ. ಶಾಲೆಗಳಲ್ಲಿ ಪಾಠ ಹೇಳುವುದಕ್ಕಿಂತಲೂ ಮನೆಪಾಠ ಮಾಡುವುದರಲ್ಲಿ ಹೆಚ್ಚಿನ ಆಸಕ್ತಿ ಹೊಂದಿರುವ ಶಿಕ್ಷಕರೂ ಇದ್ದಾರೆ. ಇಂಥ ಶಿಕ್ಷಕರ ಕಿವಿ ಹಿಂಡುವ ಕೆಲಸವನ್ನು ಪೋಷಕರು ಮಾಡಬೇಕಾಗಿದೆ. ಆದರೆ, ಅದಕ್ಕೆ ಮೊದಲು ಶಿಕ್ಷಕವೃಂದ ತಮ್ಮ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಲು ಅಗತ್ಯವಾದ ವಾತಾವರಣವನ್ನು ಸೃಷ್ಟಿಸುವುದು ವ್ಯವಸ್ಥೆಯ ಹೊಣೆಗಾರಿಕೆ.

ಸರ್ಕಾರಿ ಶಾಲೆಗಳು ಸಮಾಜದಲ್ಲಿ ಸಮಾನತೆ ರೂಪುಗೊಳ್ಳುವ ನಿಟ್ಟಿನಲ್ಲಿ ಪ್ರಯೋಗಶಾಲೆಗಳಂತೆ ಕೆಲಸ ಮಾಡುತ್ತವೆ. ಸರ್ಕಾರಿ ಶಾಲೆಗಳ ಆರೋಗ್ಯ ಒಂದು ನಾಡಿನ ಆರೋಗ್ಯದ ಮಾನದಂಡವೂ ಹೌದು.

‘ಸರ್ಕಾರಿ ಶಾಲೆಗಳನ್ನು ಉಳಿಸಿ, ಕನ್ನಡ ಶಾಲೆಗಳನ್ನು ಉಳಿಸಿ’ ಎನ್ನುವ ಬಗ್ಗೆ ಆಗಾಗ್ಗೆ ಚರ್ಚೆಗಳಾಗುತ್ತವೆ. ಮುಂದಿನ ತಲೆಮಾರಿನ ನಡೆ–ನುಡಿಯನ್ನು ನಿರ್ಧರಿಸಬೇಕಾದ ಇಂತಹ ಚರ್ಚೆಗಳು ಭಾವುಕ ನೆಲೆಗಟ್ಟಿನಲ್ಲೋ ಅಥವಾ ಕಾಮಿಡಿ ಸಿನಿಮಾಗಳ ಮೂಲಕವೋ ಮುಗಿದುಹೋಗುತ್ತವೆ. ಕನ್ನಡ ಶಾಲೆಗಳನ್ನು ಉಳಿಸುವುದು ಆದ್ಯತೆಯ ಸಂಗತಿ. ಆದರೆ, ಅದಕ್ಕೂ ಮೊದಲು ಆಗಬೇಕಿರುವುದು ಶಿಕ್ಷಕರನ್ನು ಉಳಿಸುವುದು. ಈಗ ಎಚ್ಚೆತ್ತುಕೊಳ್ಳದೆ ಹೋದರೆ, ‘ಸರ್ಕಾರಿ ಶಾಲಾ ಶಿಕ್ಷಕ’ ಎನ್ನುವ ಪ್ರಭೇದ ಮುಂದಿನ ದಿನಗಳಲ್ಲಿ ಪಳೆಯುಳಿಕೆಗಳ ಸಾಲಿಗೆ ಸೇರಿದರೆ ಯಾರೂ ಆಶ್ಚರ್ಯಪಡಬೇಕಿಲ್ಲ. ■